**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 01.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಕೆ ವಿ ಕೆ.ವಕೀಲರಿಂದ</u>**

ಆರೋಪಿ ನನಗೆ ಕಳೆದ 1 ವರ್ಷದಿಂದಲೂ ಪರಿಚಯ ಇರುವುದು. ಇತ ಗೋಕಾಕ ತಾಲೂಕಿನ ಉಪ್ಪಾರಟ್ಟಿಯಲ್ಲಿ ವಾಸವಾಗಿರುವನು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು, ಆದರೆ ಆತ ಮುಧೋಳದಲ್ಲಿ ಕೆಲಸ ಮಾಡುತ್ತಿದ್ದನು. ನನ್ನದು ಒಕ್ಕಲತನ ಉದ್ಯೋಗ ಇರುವುದು. ನನ್ನ ತಂದೆಯ ಹೆಸರಿನಲ್ಲಿ 7 ಎಕರೆ ಜಮೀನು ಹಾಗೂ ನನ್ನ ಹೆಸರಿನಲ್ಲಿ 1 ಎಕರೆ 13 ಗುಂಟೆ ಜಮೀನು ಇರುವುದು. ಈ ಜಮೀನಿನಲ್ಲಿ ಪೇರು ಹಣ್ಣನ್ನು ಬೆಳೆಯುತ್ತೇವೆ. ವರ್ಷಕ್ಕೆ ಎಲ್ಲಾ ಖರ್ಚು ವೆಚ್ಚ ತೆಗೆದ ನಂತರ 3 ಲಕ್ಷ 50 ಸಾವಿರ ಆದಾಯ ಬರುವುದು. ಈ ಆದಾಯವನ್ನು ನಾವು ಮನೆಯಲ್ಲಿ ಇಟ್ಟಿಕೊಂಡಿರುತ್ತೇವೆ., ಬ್ಯಾಂಕಿನಲ್ಲಿ ಇಟ್ಟಿರುವುದಿಲ್ಲ. ಮುಧೋಳ ಪಟ್ಟಣ HDFC and Bank of Baroda ದಲ್ಲಿ ಖಾತೆಯನ್ನು ಹೊಂದಿರುವೆನು. Bank of Baroda ದ ನನ್ನ ಖಾತೆಯಲ್ಲಿ 3 ಲಕ್ಷ ಮತ್ತು HDFC ಖಾತೆಯಲ್ಲಿ 12 ಸಾವಿರ ಹಣ ಇರುವುದು.

2. ಆರೋಪಿಗೆ ಈ ಹಣ ನೀಡುವ ಪೂರ್ವದಲ್ಲಿ ನಾನು ಈ ಎರಡು ಬ್ಯಾಂಕ್ ಗಳಿಂದ ಜುಲೈ ತಿಂಗಳ ಕೊನೆಯ ವಾರದಲ್ಲಿ 2 ಲಕ್ಷ ತೆಗೆದುಕೊಂಡು ಬಂದಿದ್ದು ಮತ್ತು ಮನೆಯಲ್ಲಿ ಇದ್ದ 2 ಲಕ್ಷ ಸೇರಿಸಿ ಒಟ್ಟು 7 ಲಕ್ಷ 60 ಸಾವಿರ ಹಣ ಆರೋಪಿಗೆ ನೀಡಿರುವೆನು. ನಾನು ಮಾರಾಟ ಮಾಡಿರುವ ನಿವೇಶನ ಹಣ ಬ್ಯಾಂಕ್ ಖಾತೆಗೆ ಜಮಾ ಆಗಿದ್ದು ಆ ಹಣವನ್ನು ಆರೋಪಿಗೆ ನೀಡಿರುವೆನು. ಈ ಎರಡು ಬ್ಯಾಂಕ್ ಖಾತೆಯ statement ನ್ನು ಹಾಜರು ಪಡಿಸುತ್ತೇನೆ. ಮಾರಾಟ ಮಾಡಿರುವ ಪ್ಲಾಟ್ ಮುಧೋಳ ಪಟ್ಟಣದ ಜಯನಗರದಲ್ಲಿ ಇರುವುದು, ಅದರ ನಂಬರ್ ನಿರ್ದಿಷ್ಟವಾಗಿ ನೆನಪಿರುವುದಿಲ್ಲ. ಆ ದಾಖಲೆಯನ್ನು ನೋಡಿದೆ ನನಗೆ ನಿವೇಶನ ಸಂಖ್ಯೆ ಹೇಳಲು ಆಗುವುದಿಲ್ಲ. ಈ ನಿವೇಶನವನ್ನು ಮಳಲಿ ಎಂಬುವವರಿಗೆ ಮಾರಾಟ ಮಾಡಿರುವೆನು, ಅವರ ಹೆಸರು ನನಗೆ ಈಗ ನೆನಪು ಆಗುತ್ತಿಲ್ಲ. ದಿಃ 18.07.2024 ರಂದು ಈ ನಿವೇಶನ ಮಾರಾಟ ಮಾಡಿರುವೆವು. ಈ ನಿವೇಶನದಿಂದ ಮಾರಾಟ ಮಾಡಿ ಬಂದ ಹಣ ಮತ್ತು ನನ್ನ ಹತ್ತಿರ ಇದ್ದ ಹಣ ಒಟ್ಟು ಸೇರಿಸಿ 7 ಲಕ್ಷ

60 ಸಾವಿರ ಹಣ ಆರೋಪಿಗೆ ನೀಡಿರುವೆನು.

3. ಆರೋಪಿಗೆ ಬೇಕಾಗಿದ್ದ ಒಬ್ಬ ಸ್ನೇಹಿತ ವಿನಾಯಕ ನಲಗಿ ನನಗೂ ಸಹ ಆತ್ಮೀಯನಾಗಿರುವುದರಿಂದ ಅವರ ಹೇಳಿಕೆಯ ಮೇರೆಗೆ ನಾನು ಆರೋಪಿಯ ಕಡೆಯಿಂದ ಯಾವುದೇ ದಾಖಲೆ ಬರೆಸಿಕೊಳ್ಳದೆ ಆರೋಪಿಗೆ ಹಣ ನೀಡಿರುವೆನು. ವಿನಾಯಕ ನಲಗಿ ಇತ ಮುಧೋಳ ಪಟ್ಟಣದಲ್ಲಿ ವಾಸವಾಗಿರುವನು. ನನಗೂ ಮತ್ತು ವಿನಾಯಕನಿಗೆ ಬಹಳ ವರ್ಷದಿಂದ ಪರಿಚಯ ಇರುವುದು. ಆರೋಪಿಗೆ ಈ ಹಣವನ್ನು 2024 ರ ಆಗಸ್ಟ್ ತಿಂಗಳ 2 ನೇ ವಾರದಲ್ಲಿ ನೀಡಿರುವೆನು, ದಿನಾಂಕದ ಬಗ್ಗೆ ದಾಖಲೆನುನ್ನು ನೋಡದೆ ಹೇಳಲು ಆಗುವುದಿಲ್ಲ. ಹಣ ಕೊಟ್ಟ ಬಗ್ಗೆ ನಾನು ಡೈರಿಯಲ್ಲಿ ಬರೆದಿರುವೆನು. ಆ ಡೈರಿಯನ್ನು ಹಾಜರು ಮಾಡಿರುವುದಿಲ್ಲ. ನನ್ನವೈಯಕ್ತಿಕ ಡೈರಿಯಲ್ಲಿ ಈ ವ್ಯವಹಾರದ ಬಗ್ಗೆ ಬರೆದು ಇಟ್ಟಿರುವೆನು. ಆ ದಾಖಲೆಗಳನ್ನು ನಮ್ಮ ವಕೀಲರಿಗೆ ತೋರಿಸಿರುವುದಿಲ್ಲ. ದೂರಿನಲ್ಲಿ ಆರೋಪಿಗೆ ಹಣ ನೀಡಿರುವ ದಿನಾಂಕ ನಮೂದು ಮಾಡಿರುವುದಿಲ್ಲ , ಆದರೆ ಆಗಸ್ಟ್ 2 ನೇ ವಾರ ಅಂತ ನಮೂದು ಮಾಡಿರುವೆನು. ಈ ಹಣಕಾಸಿನ ವ್ಯವಹಾರಕ್ಕೆ ಸಂಬಂದಪಟ್ಟಂತೆ ಆರೋಪಿ ನೀಡಿರುವ ನಿಪಿ 1 ರ ಚೆಕ್ ಮಾತ್ರ ಪುರಾವೆ ಇರುವುದು ಎಂದರೆ ಸರಿ. ಇದನ್ನು ಹೊರತು ಪಡಿಸಿ ಬೇರೆ ಪುರಾವೆ ಇರುವುದಿಲ್ಲ ಎಂದರೆ ಸರಿ.

4. ನಾನು ಆರೋಪಿಗೆ ನಮ್ಮ ವಕೀಲರ ಮೂಲಕ ನೀಡಿರುವ ನೋಟಿಸಿನಲ್ಲಿ ನನ್ನ ಉದ್ಯೋಗ ನಮೂದು ಮಾಡಿರುವೆನು. ಆರೋಪಿಯ ತನ್ನ ಹೆಂಡತಿ ಮತ್ತು ಮಕ್ಕಳೊಂದಿಗೆ ಮುಧೋಳ ಪಟ್ಟಣದ ಯಾವ ಓಣಿಯಲ್ಲಿ ವಾಸವಾಗಿರುವನು ಎಂದು ನನಗೆ ಗೊತ್ತಿರುವುದಿಲ್ಲ, ಆದರೆ ಆತ ಜಮಖಂಡಿಯ ಟೈರ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದನು. ಈ ಟೈರ್ ಅಂಗಡಿಯ ಮಾಲೀಕರ ಹೆಸರು ಮಾನವ್ವ ಮತ್ತು ವಿಜಯ ಕುಮಾರ ಎಂದರೆ ಸಾಕ್ಷಿಯು ತನಗೆ ಮಾಹಿತಿ ಇಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ಸ್ನೇಹಿತ ವಿನಾಯಕ ಆರೋಪಿಗೆ ಹಣ ನೀಡುವಂತೆ ಸಲಹೆ ನೀಡಿರುವುದರಿಂದ ಆ ಕಾರಣಕ್ಕೆ ನಾನು ಹಣ ನೀಡಿರುವೆನು. ಈ ಹಣ ನೀಡುವ ಸಮಯದಲ್ಲಿ ವಿನಾಯಕನೂ ಸಹ ಹಾಜರು ಇದ್ದನು. ಈ ಮಾರಾಟ ಮಾಡಿರುವ ನಿವೇಶನ ಖರೀದಿ ಪತ್ರ ಮತ್ತು ಹುತಾರ್ ದಾಖಲೆಗಳನ್ನು ಹಾಜರು ಪಡಿಸುತ್ತೇನೆ.

5. ನನ್ನ ತಂದೆ, ನನ್ನ ಸಹೋದರು ಮತ್ತು ನನ್ನ ಹೆಂಡತಿ ಮತ್ತು 3 ಜನ ಮಕ್ಕಳು ಕೂಡಿಯೇ ವಾಸವಾಗಿರುವೆವು. ನಾನು 2024 ರ ಆದಾಯ ತೆರಿಗೆ ಪಾವತಿ ಮಾಡಿರುವೆನು. ನಾನು 2025 ರ

ಆದಾಯ ತೆರಿಗೆ ಪಾವತಿ ಮಾಡಿರುವುದಿಲ್ಲ, ಆ ಕಾರಣಕ್ಕೆ ಆರೋಪಿಗೆ ಕೈಗಡ ಸಾಲ ನೀಡಿರುವ ಬಗ್ಗೆ ನಾನು ಘೋಷಣೆ ಮಾಡಿಕೊಂಡಿರುವುದಿಲ್ಲ. 2023-24 ನೇಸಾಲಿನ ಆದಾಯ ತೆರಿಗೆಯನ್ನು ಪಾವತಿ ಮಾಡಿರುವೆನು. ವಿನಾಯಕ ನವಲಿಯ ಸೀಮೆಂಟ್ ಪೈಪ್ ಗಳನ್ನು ತಯಾರು ಮಾಡುವ ಪ್ಯಾಕ್ಟರಿಯಲ್ಲಿ ಈ ಹಣವನ್ನು ನೀಡಿರುವೆನು. ಆರೋಪಿಯ ಜೊತೆ ಬೇರೆ ಯಾರು ಹಣ ತೆಗೆದುಕೊಳ್ಳುವ ಸಮಯದಲ್ಲಿ ಇರಲಿಲ್ಲ. ಆರೋಪಿಗೆ ನೀಡಿರುವ ನೋಟುಗಳ ಮುಖ ಬೆಲೆ ರೂ.500/- ಮತ್ತು 200/- ಗಳಾಗಿದ್ದವು. ನಾನು ರನ್ನ ಸೌಹಾರ್ದ ಬ್ಯಾಂಕ್ ನಿಂದ ನಗದು ರೂಪದಲ್ಲಿ ಹಣ ಪಡೆದುಕೊಂಡು ಬಂದಿರುವೆನು. ಅದರ ಕ್ಯಾಶ್ ವೋಚರ್ ನ್ನು ನಾನು ಹಾಜರು ಪಡಿಸುತ್ತೇನೆ.

6. ನಾನು ಬಿ.ಎ ಪದವಿಧರನಾಗಿರುವೆನು. ಈ ರನ್ನ ಸೌಹಾರ್ದ ಬ್ಯಾಂಕ್ ನಲ್ಲಿ ಖಾತೆ ತೆಗೆಸಿ 6-7 ವರ್ಷಗಳು ಆಗಿರಬಹುದು. ನನ್ನ ಮತ್ತು ಆರೋಪಿಯ ಈ ಹಣಕಾಸಿನ ವ್ಯವಹಾರ ಬಗ್ಗೆ ವಿನಾಯಕನಿಗೆ ಹೊರತು ಪಡಿಸಿ ಬೇರೆ ಯಾರಿಗೂ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ಮುಂದಿನ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.07.03 10:25:40 +0530